**PW-14**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 620/14**

**ಸಾಕ್ಷಿಯನ್ನು ದಿಃ 13.06.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ ಎಲ್ ಕೆ ಅವರಿಂದ-**

1. ಆರೋಪಿ ವಿವಿಧ ರೀತಿಯಲ್ಲಿ ಬ್ಯಾಂಕಿಗೆ ವಂಚನೆ ಮಾಡಿದ್ದಾರೆ ಎಂದು ನನಗೆ ಹೆಡ್ ಆಫೀಸ್ ನಿಂದ ಇನ್ ವೆಸ್ಟಿಗೇಷನ್ ಗೆಂದು 2011-12ರ ಸಮಯ ನನಗೆ ಗೊತ್ತಾಯಿತು. ಅಲ್ಲಿವರೆಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಆ ಸಮಯದಲ್ಲಿ ಮ್ಯಾನೇಜರ್ ಅವರನ್ನು ಬಿಟ್ಟರೆ ನಾನೇ ಮುಖ್ಯಸ್ಥ ಎಂದರೆ ಸರಿ. ಸದರಿ ಬ್ಯಾಂಕಿನ ಎಲ್ಲಾ ವ್ಯವಹಾರಗಳು ನನಗೆ ಗೊತ್ತಾಗಿ ನಡೆಯುತ್ತವೆ ಎಂದರೆ ಸರಿ.

**2.** ರಾಜಮ್ಮ ಅವರಿಗೆ ಸಂಬಂಧಪಟ್ಟಂತೆ ಚೆಕ್ ಪಾಸ್ ಆದಾಗ ಕವರಿಂಗ್ ಲೆಟರ್ ಇರಲಿಲ್ಲ. ರಾಜಮ್ಮ ಅವರ ಹಣಕ್ಕೆ ಸಂಬಂಧಪಟ್ಟಂತೆ ಕವರಿಂಗ್ ಲೆಟರ್ ಇತ್ತು. ಆದರೆ ಅದನ್ನು ನಾನು ನೋಡಿಲ್ಲ. ಮ್ಯಾನೇಜರ್ ಕವರಿಂಗ್ ಲೆಟರ್ ನನ್ನ ಬಳಿ ಇದೆ ಚೆಕ್ ಪಾಸ್ ಮಾಡಿ ಎಂದು ನನಗೆ ಹೇಳಿದ್ದರು. ಈ ಬಗ್ಗೆ ಮ್ಯಾನೇಜರ್ ನನಗೆ ಯಾವುದೇ ಲಿಖಿತ ಹೇಳಿಕೆ ನೀಡಿಲ್ಲ ಹಾಗೂ ನಾನು ಪಡೆದುಕೊಂಡಿಲ್ಲ. ರಾಜಮ್ಮ ಕೋಂ ಜಗನ್ನಾಥ ಅವರು ಚೆಕ್ ಡ್ರಾ ಮಾಡಲು ಕೊಟ್ಟಿದ್ದು ಸದರಿ ಹಣವನ್ನು ರಾಜಮ್ಮ ಕೋಂ ಶಿವೇಗೌಡ ಅವರ ಅಕೌಂಟ್ ಗೆ ಹೋಗಿದೆ ಎಂದು ಹೆಡ್ ಆಫೀಸ್ ನವರು ಬಂದು ಹೇಳುವ ತನಕ ನಮಗೆ ಗೊತ್ತಿರಲಿಲ್ಲ. ರಾಜಮ್ಮ ಕೋಂ ಜಗನ್ನಾಥ ಅವರು ಲಿಖಿತ ರೂಪದಲ್ಲಿ ಯಾವುದೇ ದೂರು ನೀಡಿಲ್ಲ ಎಂದರೆ ಸರಿ.

**3.** ರೂ.**55,000/-** ಹಣವನ್ನು ಆರೋಪಿ ದುರುಪಯೋಗ ಪಡಿಸಿಕೊಂಡಿರುವ ವಿಚಾರ ಹೆಡ್ ಆಫೀಸ್ ನವರು **inspection** ಬಂದಾಗ ನಮಗೆ ಗೊತ್ತಾಗಿರುತ್ತದೆ ಎಂದರೆ ಸರಿ. ವರದರಾಜು ಅವರ ಹಣದ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ನಾನು ದಾಖಲಾತಿಗಳನ್ನು ನೋಡಿಲ್ಲ. ಕೆಫಿ ಕೂರ್ ಗ್ ಕಾವೇರಪ್ಪ ಅವರ ಎಸ್ ಬಿ ಅಕೌಂಟ್ ನ ಕಾರ್ ಲೋನ್ ಬಗ್ಗೆ ತನಿಖಾಧಿಕಾರಿ ಅವರು ನನಗೆ ತೋರಿಸಿರುತ್ತಾರೆ. ತನಿಖಾಧಿಕಾರಿಗಳು ಬರುವ ಮುಂಚೆ ನಾನು ಕಾವೇರಪ್ಪ ಅವರ ಅಕೌಂಟ್ ಬಗ್ಗೆ ಅನುಮಾನ ಇರಲಿಲ್ಲ. ನಾನು ಕಾವೇರಪ್ಪ ಅವರ ಲೋನ್ **transaction** ಗೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳಿಗೆ ನಾನು ಸಹಿ ಮಾಡಿದ್ದೇನೆ ನನಗೆ ನೆನಪಿಲ್ಲ. ಉಪ್ಪಾರ್ ಅವರ **25,00,000/-** ಹಣದ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ನಾನು

ದಾಖಲಾತಿಗಳನ್ನು ನೋಡಿರುತ್ತೇನೆ. ಉಪ್ಪಾರ ಅವರ ಅಕೌಂಟ್ ನಿಂದ ಶ್ರದ್ಧಾ ಅವರಿಗೆ 25,00,000/- ಹಣ ಆರ್ ಟಿ ಜಿ ಎಸ್ ಆದಾಗ ನಾನು ಕರ್ತವ್ಯದಲ್ಲಿ ಇದ್ದೆ. ಸದರಿ ಉಪ್ಪಾರ ವರು ಬಂದು ಯಾವುದೇ ದೂರು ನೀಡಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಹಾಗೆ ರಾಜಮ್ಮ, ವರದರಾಜು, ಕಾವೇರಪ್ಪ ಹಾಗೂ ಉಪ್ಪಾರರವರ ಹಣ ದುರುಪಯೋಗ ಆಗಿವೆ ಎಂದು ಹೇಳುವ ದಿನಗಳಲ್ಲಿ ನಾನು ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ನನಗೆ ಆರೋಪಿ ಬಗ್ಗೆ ಅನುಮಾನ ಬಂದಿರುವುದಿಲ್ಲ ಎಂದರೆ ಸರಿ. ಸದರಿ ಎಲ್ಲಾ ವ್ಯವಹಾರಗಳು ನನ್ನ ನೇತೃತ್ವದಲ್ಲಿ ನಡೆಯುತ್ತವೆ ಎಂದರೆ ಸರಿ. ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಾಜಮ್ಮ ಅವರ ವಿತ್ ಡ್ರಾ ಫಾರ್ಮ್ ನಲ್ಲಿ ರಾಜಮ್ಮ ಅವರ ಸಹಿ ವ್ಯತ್ಯಾಸವಾಗಿದೆ ಎಂದು ಮ್ಯಾನೇಜರ್ ಅವರಿಗೆ ನಾವು ಹೇಳಿದ್ದೇವು. ಆಗ

7. ನಾನು ಬ್ಯಾಂಕಿಗೆ ಬರುವ ಮುಂಚೆ ಟ್ರೈನಿಂಗ್ ಆಗಿದೆ. ನಮ್ಮ ಬ್ಯಾಂಕಿನ ನಿಯಾಮವಳಿಗಳನ್ನು ಯಾರೇ ಮ್ಯಾನೇಜರ್ ಏನೇ ಹೇಳಿದರು ನಾವು ನಿಯಾಮವಳಿ ಬಿಟ್ಟು ಕೆಲಸ ಮಾಡುವಂತಿಲ್ಲ ಎಂದರೆ ಸರಿ. ಚೆಕ್ ಇಲ್ಲದೆ ಬೇರೆಯವರ ಅಕೌಂಟ್ ಆರ್ ಟಿ ಜಿ ಎಸ್ ಮಾಡುವುದು ತಪ್ಪು ಎಂಬ ನಿಯಮ ಇದೆ ಎಂದರೆ ಸರಿ.

8. ಹಣ ಹೋಗಿರುವ ಶ್ರದ್ಧಾ ಎಂಟರ್ ಪ್ರೈಸಸ್ ಯಾರಿಗೆ ಸೇರಿದ್ದು ನನಗೆ ಗೊತ್ತಿಲ್ಲ. ಇನ್ಸ್ ಪೆಕ್ಟರ್ ಅವರು ಬಂದು ಹೇಳಿದಾಗ ಅದು ಆರೋಪಿ ಹೆಂಡತಿ ಅಕೌಂಟ್ ಎಂದು ನನಗೆ ತಿಳಿದುಬಂತು. ಶ್ರದ್ಧಾ ಎಂಟರ್ ಪ್ರೈಸಸ್ ಆರೋಪಿ ಹೆಂಡತಿಗೆ ಸೇರಿದೆ ಎಂದು ಯಾವುದೇ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸರಿ. ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ, ಆರೋಪಿ ಯಾವುದೇ ಹಣ ಪಡೆದಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.